ಅವೆಲ್ಲಾ ಮಾತುಗಳು ಒಳ್ಳೆಯ ಮಾತುಗಳು. ಆದರೆ, ಅದು ಕವಿತೆಯ ಸಾಲಲ್ಲ. ಕವಿತೆಯಾಗಿ ಒಂದು ಆಂತರಿಕತೆ ಇರಬೇಕು, ಒಂದು ಸಂಕೀರ್ಣತೆ ಇರಬೇಕು.

- **ಆದರೆ, ಮಂಜುನಾಥ್ ಇದು ಒಳ್ಳೆಯ ಕವಿತೆಗಳ ಕಾಲ ಅಲ್ಲ. ಈಗ ಕವಿತೆ ಅಂದರೆ ಘೋಷಣೆಗಳಿರಬೇಕು. ಗಂಟೆ ಹೊಡೆದಂತೆ ಅಥವಾ ನಗಾರಿ ಬಾರಿಸಿದಂತೆ ಬರೆದರೆ ಮಾತ್ರ ಕವಿತೆ ಅಂತ ಪರಿಗಣಿಸಲ್ಪಡುತ್ತದೆ ಎಂದು ನೀವು ಎಲ್ಲೋ ಒಂದು ಕಡೆ ಹೇಳಿಕೊಂಡಿದ್ದೀರಿ. ಇಂತಹ ಈ ಕಾಲದಲ್ಲೂ ನೀವು ಇಷ್ಟು ಉತ್ಸಾಹದಲ್ಲಿ ಇಷ್ಟು ನಂಬಿಕೆಯಲ್ಲಿ ಬರೀತೀರಲ್ಲಾ ಇದು ಹೇಗೆ ಅಂತ...**

ನಾವು ನೋಡಿದಹಾಗೆ ರಶೀದ್, ಕವಿತೆಗಳನ್ನು ಸಾಕಷ್ಟು ಜನ ಓದುತ್ತಿಲ್ಲ. ಈಗ ನಾನೊಂದು ಕವಿತೆ ಬರೀತೀನಿ, ನನಗೆ ತಕ್ಷಣ ಯಾರು ಸಿಗತ್ತಾರೊ, ನನ್ನ ಹೆಂಡತಿಯೋ ಅಥವಾ ನನ್ನ ಎದುರುಗಡೆ ಬರೋ ಸ್ನೇಹಿತನೋ ಅವನಿಗೆ ಓದುತ್ತೇನೆ. ನೋಡಪ್ಪ ಹೀಗೊಂದು ಅನ್ನಿಸಿತು, ಇದನ್ನ ಬರೆದೆ. ಅವನು ಚೆನ್ನಾಗಿದೆಯಣ್ಣ ಅಂತ ಅಂದರೆ ಸಂಪೂರ್ಣವಾಗಿ ಲೋಕಕ್ಕೆ ವ್ಯಕ್ತವಾಯಿತು, ಲೋಕದ ಮನ್ನಣೆ ಪಡೆಯಿತು ಅಂತ. ಒಂದು ಕವಿತೆ ಬರೆದಾಗಲೇ ಅತ್ಯಂತ ಹೆಚ್ಚಿನ ಸಂತೋಷ ನಮಗೆ ಸಿಕ್ಕಿಬಿಟ್ಟಿರುತ್ತದೆ. ಆದರೂ ಹೊರಗಡೆ ಒಂದು ಸಾಕ್ಷಿ ಬೇಕು. ಇನ್ನೊಬ್ಬ ಅಂದಾಗ ಅದು ಲೋಕ, ಅದು ಸಾಕು. ಹಾಗಾಗಿ ನೀವು ಕವಿತೆ ಬರೆದು ನಾಲ್ಕು ಜನ ಚೆನ್ನಾಗಿದೆ ಅಂದರೆ ಇಡೀ ಕರ್ನಾಟಕದಲ್ಲಿ ಖ್ಯಾತಿ ಪಡೀತು ಎಂದುಕೊಳ್ಳಬಹುದು. ಬೇಂದ್ರೆಯವರು 'ಯಾರಿಗ ಬೇಕ್ರೀ ನಿಮ್ಮ ಕವಿತಾ' ಅಂತ ಹೇಳಿದಾಗ ನಿಮ್ಮ ಕವಿತೆ ಯಾರಿಗೆ ಬೇಕಾಗಿದೆ ರೀ, ಲೋಕಕ್ಕೆ ಬೇಕಾಗಿಲ್ಲ ಅಂತ ನಾನು ಹೇಳುವಾಗ ಅದರ ಮೂಲ ಅರ್ಥ ಏನು ಗೊತ್ತೆ, ಒಳ ಅರ್ಥ ನನಗೆ ಬೇಕಾಗಿಲ್ಲ ಎಂದು. ಈ ಕಾಲದಲ್ಲಿ ಬಾಲ್ಯ ಇಲ್ಲ... ಅಂದರೆ, ನನ್ನ ಬಾಲ್ಯ ಇಲ್ಲ ಅಂತ. ಅದರ ಒಳ ಅರ್ಥ ಏನಂದರೆ ಒಳ ಅರ್ಥ ನನಗೆ ಬೇಕೆ ಎಂದು ಕೇಳಿಕೊಳ್ಳಬೇಕು. ಬೇಕು ಎಂದರೆ ಬೇಕು ಅಂತ ಅಷ್ಟೇ. ಇನ್ನೊಬ್ಬರಿಗೆ ಬೇಕೋ ಬೇಡವೋ ಗೊತ್ತಿಲ್ಲ.

- **ನಿಮಗೆ ಇಂಗ್ಲಿಷ್ ಸಾಹಿತ್ಯ ಓದಬೇಕು ಎಂದು ಅನಿಸಿತು. ನೀವು ಇಂಗ್ಲಿಷ್ ಎಂ.ಎ. ಕೂಡ ಮಾಡಿದಿರಿ. ಜೊತೆಗೆ ನಿಮಗೆ ಝೆನ್ ಕವಿಗಳ ಸಹವಾಸ ಕೂಡ ಬಂತು. ಝೆನ್ ಕವಿಗಳನ್ನು ಕೂಡ ಓದಲಿಕ್ಕೆ ಶುರುಮಾಡಿದಿರಿ. ಝೆನ್ ಕವಿಗಳು ತುಂಬಾ ಇಷ್ಟ ಆದರು. ಈಗ ನೀವು ಗದುಗಿನ ಭಾರತದ ಸಾಲುಗಳನ್ನ ಹೇಳಿದಿರಲ್ಲ, ಈ ಸಾಲುಗಳು ಮತ್ತೆ ನಿಮ್ಮ 'ತಾವೋ' ಪದ್ಯಗಳು ಇವೆಲ್ಲ ನಿಮಗೆ ಹೇಗೆ ಒಂದೇ ಎಂದು ಅನಿಸಿತು?**

ನಾನು 'ತಾವೋ' ಪದ್ಯಗಳನ್ನು 'ಸುಮ್ಮನಿರುವ ಸುಮ್ಮಾನ' ಎಂಬ ಹೆಸರಿನಲ್ಲಿ ಅನುವಾದ ಮಾಡಿದೆ. ಅದು ನಿಮಗೂ ಗೊತ್ತಿದೆ. ಒಂದು ಪುಸ್ತಕ ಬಂದಮೇಲೆ ಇನ್ನು ನನಗೆ ಬರೆಯಲಿಕ್ಕೆ ಆಗುವುದಿಲ್ಲ ಅಂತ ಅನಿಸಿತು. ಒಂದೇ ಸಂಕಲನ ಮತ್ತೆ ಬರೆಯಲಿಕ್ಕಾಗುವುದಿಲ್ಲ. ಆವಾಗ ನಾನು ಅನುವಾದ ಮಾಡಿದೆ. ಲಾವೋತ್ಸೆನ ಅದರಲ್ಲಿರುವ ಒಂದು ವಿರೋಧಾಭಾಸದ ಮನಸ್ಸು ನಾವು ಅಲ್ಲಮನ ವೈರುದ್ಧ್ಯ ಹೇಳುತ್ತೇವಲ್ಲ, ಆ ದ್ವಂದ್ವಾತ್ಮಕತೆ ಮತ್ತು ದ್ವಂದ್ವಾತ್ಮಕತೆಯಲ್ಲಿರುವ ಸತ್ಯ ಮನಸ್ಸಿಗೆ ನಾಟುವ ಹಾಗೆ ಇತ್ತು. ಹಾಗಾಗಿ ನಾನು ತಾವೋವನ್ನು ಅನುವಾದ ಮಾಡಿದೆ. ಎಲ್ಲಾ ಶ್ರೇಷ್ಠ ಮನಸ್ಸುಗಳು ಅನುಭವವನ್ನು ಗ್ರಹಿಸುವಾಗ ಕ್ರಮಬದ್ಧವಾಗಿ ಗ್ರಹಿಸುವುದಿಲ್ಲ.